MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - TUESDAY 30-8-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಬೆಳೆಯುತ್ತಿರುವ ಬೇಡಿಕೆಯಿಂದ ಪೌಲ್ಟ್ರಿ ವಲಯದ ಪ್ರಗತಿ 2023 ರಲ್ಲಿ 30 ಶೇಕಡಾ ನಿರೀಕ್ಷೆ

ಬೆಳೆಯುತ್ತಿರುವ ಬೇಡಿಕೆಯಿಂದ 2023 ರಲ್ಲಿ ಪೌಲ್ಟ್ರಿ ವಲಯದ ಆರ್ಥಿಕ ಪ್ರಗತಿ 30 ಶೇಕಡಾ ಹೆಚ್ಚಳವಾಗಿ 2,50,000 ಕೋಟಿಗೇರಲಿದೆಯೆಂದು CRISIL RATINGS ವರದಿಯಲ್ಲಿ ಹೇಳಲಾಗಿದೆಯೆನ್ನಲಾಗಿದೆ. ಕೊರೋನಾ ಅವಧಿಯ ನಂತರ ವಾಣಿಜ್ಯ ಚಟುವಟಿಕೆಗಳ ಚೇತರಿಕೆ(HORECA) ಹೋಟೆಲ್, ಕೈಗಾರಿಕೆಗಳ ಚಟುವಟಿಕೆ ಪೂರ್ಣಪ್ರಮಾಣದೊಂದಿಗೆ ಚುರುಕುಗೊಂಡಿರುವುದರಿಂದ ವ್ಯವಹಾರದಲ್ಲಿ ಪ್ರಗತಿಯಾಗಲಿದೆಯೆನ್ನಲಾಗಿದೆ. ಇದರಿಂದ ಹಿಂದಿನ ವರ್ಷದಿಂದ ಈ ವರ್ಷದ ವ್ಯವಹಾರದಲ್ಲಿ 30 ಶೇಕಡಾ ಪ್ರಗತಿಯಾಗಲಿದೆಯೆನ್ನಲಾಗಿದೆ. ಹೆಚ್ಚಿನ ಬೇಡಿಕೆಯಿಂದ ಪೌಲ್ಟ್ರಿ ವಲಯದ ಸಾಮರ್ಥ್ಯ 12 ಶೇಕಡಾ ವರ್ಧಿಸುವ ನಿರೀಕ್ಷೆಯಿದೆ. ಬೇಡಿಕೆಗನುಗುಣವಾಗಿ ಪೂರೈಕೆ ಹೆಚ್ಚಳವಾಗಲು ಪೌಲ್ಟ್ರಿ ಕೈಗಾರಿಕಾ ವಲಯದ ಸಾಮರ್ಥ್ಯ ವೃದ್ಧಿಯಾಗಲಿದೆಯೆನ್ನಲಾಗಿದ್ದು, ಹೆಚ್ಚುತ್ತಿರುವ ನಿರ್ವಹಣಾ ವೆಚ್ಚ ಸಮಸ್ಯೆಯಾಗಿವೆಯೆನ್ನಲಾಗಿದೆ.

## ಉದ್ದು, ತೊಗರಿ ಬಿತ್ತನೆ ಗಣನೀಯ ಇಳಿಕೆ

ಆಗಸ್ಟ್ 12 ರ ತನಕ ಉದ್ದು, ತೊಗರಿ ಬಿತ್ತನೆಯಲ್ಲಿ ಗಣನೀಯ ಪ್ರಮಾಣದ ಇಳಿಕೆಯಾಗಿದೆಯೆನ್ನಲಾಗಿದೆ. ಉದ್ದು, ತೊಗರಿ ಬಿತ್ತನೆ ಹಿಂದಿನ ಸೀಸನ್‌ಗಿಂತ 11.67 ಶೇಕಡಾ ಹಾಗೂ ಉದ್ದು 4.57 ಶೇಕಡಾ ಇಳಿಕೆಯಾಗಿದೆಯೆನ್ನಲಾಗಿದೆ. ಬಿತ್ತನೆ ಪ್ರದೇಶಗಳಲ್ಲಿ ಅಧಿಕ ಮಳೆಯಿಂದ ಹೆಚ್ಚಿನ ನೀರು ತುಂಬಿ ಬಿತ್ತನೆಗೆ ತೊಡಕಾಗಿದೆಯೆನ್ನಲಾಗಿದೆ. ಬಿತ್ತನೆ ಪ್ರದೇಶದ ಕೊರತೆಯನ್ನು ಈ ವರ್ಷ ಸರಿದೂಗಿಸುವುದು ಕಷ್ಟಕರವೆನ್ನಲಾಗಿದ್ದು, ಇವುಗಳ ಉತ್ಪಾದನೆ ಹಿಂದಿನ ಖಾರೀಫ್ ಸೀಸನ್‌ನ ಉತ್ಪಾದನೆಗಿಂತ ಇಳಿಕೆಯಾಗುವ ಸಾಧ್ಯತೆಯಿದೆಯೆನ್ನಲಾಗಿದೆ. ಈಗಾಗಲೇ ಉದ್ದು, ತೊಗರಿ ಹಾಗೂ ಇವುಗಳ ಬೆಳೆಗಳ ದರ ಗಣನೀಯ ಪ್ರಮಾಣ ಹೆಚ್ಚಳವಾಗಿರುವುದರಿಂದ ದಾಸ್ತಾನುಗಾರರು ಇವುಗಳ ದಾಸ್ತಾನು ಪ್ರಮಾಣ ಪ್ರಕಟ ಪಡಿಸಲು ಸರಕಾರ ಕಡ್ಡಾಯಗೊಳಿಸಿದೆಯೆನ್ನಲಾಗಿದೆ.

## ಬ್ರೆಜಿಲ್‌ನ 2022-23 ರ ಸೋಯಾಬೀನ್ ಉತ್ಪಾದನೆ ಹೆಚ್ಚಳ ನಿರೀಕ್ಷೆ

CONAB ಮುನ್ನೋಟದ ಪ್ರಕಾರ ಬ್ರೆಜಿಲ್‌ನ 2022-23 ನೇ ಸಾಲಿನ ಸೋಯಾಬೀನ್ ಉತ್ಪಾದನೆ ಹಿಂದಿನ ವರ್ಷಕ್ಕಿಂತ 21 ಶೇಕಡಾ ಹೆಚ್ಚಳಗೊಂಡು 150.3 ಮಿಲಿಯನ್ ಟನ್‌ಗಳಾಗಲಿದೆಯೆನ್ನಲಾಗಿದೆ. ಸೋಯಾಬೀನ್ ಎಕರೇಜ್ 3.5 ಶೇಕಡಾ ಹೆಚ್ಚಳವಾಗಿ 42.5 ಮಿಲಿಯನ್ ಹೆಕ್ಟೇರ್‌ಗಳಾಗಲಿದೆಯೆನ್ನಲಾಗಿದೆ. ಬ್ರೆಜಿಲ್‌ನ ಸೋಯಾಬೀನ್ ರಫ್ತು 22 ಶೇಕಡಾ ಹೆಚ್ಚಳಗೊಂಡು 92 ಮಿಲಿಯನ್ ಟನ್‌ಗಳಿಗೇರಲಿದೆಯೆನ್ನಲಾಗಿದೆ.

## ಹೆಚ್ಚುತ್ತಿರುವ ಸೋಯಾಬೀನ್ ಬಳಕೆ ಹಾಗೂ ಬೇಡಿಕೆ

ಈ ವರ್ಷ ಗುಜರಾತ್‌ನಲ್ಲಿ ಸೋಯಾಬೀನ್ ಬಿತ್ತನೆ ದಾಖಲೆ 2.4 ಲಕ್ಷ ಹೆಕ್ಟೇರ್‌ಗಳಿಗೆ ವಿಸ್ತರಿಸಿದೆಯೆನ್ನಲಾಗಿದೆ. ದೇಶದ ಹೆಚ್ಚುತ್ತಿರುವ ಸೋಯಾಬೀನ್ ಬಳಕೆ ಹಾಗೂ ಬೇಡಿಕೆ ಇದಕ್ಕೆ ಕಾರಣವೆನ್ನಲಾಗಿದೆ. ಜನರಲ್ಲಿ ಹೆಚ್ಚುತ್ತಿರುವ ನ್ಯೂಟ್ರೀನ್‌ಯುಕ್ತ ಆಹಾರ ಬಳಕೆಯ ಜಾಗೃತೆಯಿಂದ ಈಗ ಹೆಚ್ಚಿನ ಪ್ರಮಾಣದ ನ್ಯೂಟ್ರೀನ್‌ಯುಕ್ತ ಧಾನ್ಯವಾದ ಸೋಯಾಬೀನ್‌ಗೆ ಬೇಡಿಕೆ ನಿರಂತರ ಹೆಚ್ಚಳವಾಗುತ್ತಿದೆಯೆನ್ನಲಾಗಿದೆ. ಬಹುಧಾನ್ಯಗಳ ಪುಡಿಗಳಿಂದ ತಿನಿಸುಗಳ ತಯಾರಿಕೆಗೆ ಬಳಕೆಗಳು ಹೆಚ್ಚುತ್ತಿದೆಯೆನ್ನಲಾಗಿದೆ. ಅಲ್ಲದೆ ಪಶು ಪಕ್ಷಿ(ಪೌಲ್ಟ್ರಿ ವಲಯ) ಹಾಗೂ ಫಿಶ್ ಫಾರ್ಮ್‌ಗಳಿಗೆ ಹೆಚ್ಚಿನ ಬಳಕೆಯಿದೆ(ಸೋಯಾ DOC) ರೈತರಿಗೆ ಸೋಯಾಬೀನ್ ಬೆಳೆಯಿಂದ ಜೋಳ ಅಥವಾ ನೆಲಗಡಲೆ ಬೆಳೆಯುವುದಕ್ಕಿಂತ ಹೆಚ್ಚಿನ ಆದಾಯ ದೊರೆಯುತ್ತಿದೆಯೆನ್ನಲಾಗಿದೆ.